ಉಪತಹಶೀಲ್ದಾರವರ ನ್ಯಾಯಾಲಯ, ನಾಡ ಕಛೇರಿ ಕೊಟ್ಟೂರು

ಸಂ/ಕಂ/ಹ.ಬ/ನಾ.ಕ.ಕೊ/70/2015-16.

ದಿನಾಂಕ:12-04-2016

| ಅರ್ಜಿದಾರರು | ತಕರಾರುದಾರರು |
|---|---|
| 1)ಸೊಕ್ಕೆ ಭರಮಪ್ಪ ತಂದೆ ಲೇಟ್ ಸೋಕ್ಕೇರ ಮಲ್ಲಪ್ಪ<br>2)ಸೊಕ್ಕೆ ಮಲ್ಲಪ್ಪ<br>ನಡುಮಾವಿನಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಕೊಟ್ಟೂರು |
| ಕೂಡ್ಲಿಗಿ ತಾಲೂಕು ಉಜ್ಜನಿ ಗ್ರಾಮದ ಸನಂ 295ಡಿ. 296ಬಿ. ವಿಸ್ತೀರ್ಣ 4-13. 1-36. ಎಕ್ರೆ ಜಮೀನುಗಳನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಉಜ್ಜನಿ ಗ್ರಾಮದ ಸನಂ 295ಡಿ. 296ಬಿ. ವಿಸ್ತೀರ್ಣ 4-13. 1-36. ಎಕ್ರೆ ಜಮೀನುಗಳನ್ನು ಸದರಿ ತಾಲೂಕು ನಡುಮಾವಿನಹಳ್ಳಿ ಸೊಕ್ಕೆ ಭರಮಪ್ಪ ತಂದೆ ಸೊಕ್ಕೇರ ಮಲ್ಲಪ್ಪ ಇವರು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಉಜ್ಜನಿ ಇವರು ನಮೂನೆ-21 ರ ನೋಟಿಸನ್ನು ದಿನಾಂಕ 03-05-2013 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಅರ್ಜಿದಾರನ ಇನ್ನಿತರೇ ವಾರಸುದಾರರು ನಮೂನೆ-21ಕ್ಕೆ ಸಹಿ ಮಾಡಿಲ್ಲದ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 88/2012-13. ದಿನಾಂಕ 24-06-2013 ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದೆಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ: 19-11-2015 ರಿಂದ 12-04-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆಯ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಉಜ್ಜನಿ ಗ್ರಾಮದ ಸನಂ 295ಡಿ. 296ಬಿ. ವಿಸ್ತೀರ್ಣ 4-13. 1-36. ಎಕ್ರೆ ಜಮೀನುಗಳು ನಮ್ಮ ತಂದೆಯವರಾದ ಸೊಕ್ಕೇರ ಮಲ್ಲಪ್ಪ ತಂದೆ ಕರಿಯಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 25-05-1960 ರಂದು ಹಾಗೂ ನಮ್ಮ ತಾಯಿಯವರಾದ ಸೊಕ್ಕೇರ ಗಂಗಮ್ಮ ಗಂಡ ಸೋಕ್ಕೇರ ಮಲ್ಲಪ್ಪ ಇವರು ದಿನಾಂಕ 13-09-1982 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಪಾಲು ವಿಭಾಗದ ಒಪ್ಪಿಗೆ ಪತ್ರ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರು ಹೇಳಿಕೆಗಳನ್ನು ಕೇಳಿ ಹಾಗೂ ಗ್ರಾಮಲೆಕ್ಕಿಗರು ಮತ್ತು ಕಂದಾಯ ಪರಿವೀಕ್ಷಕರು ಗ್ರಾಮದಲ್ಲಿ ಮರು ವಿಚಾರಣೆ ಮಾಡಲಾಗಿ ಸದರಿ ಪಾಲು ವಿಭಾಗದ ಒಪ್ಪಗೆ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ನಮ್ಮ ಒಪ್ಪಿಗೆ ಇರುತ್ತದೆಯೆಂದು ನಮೂನೆ-21 ಕ್ಕೆ ಸಹಿ ಮಾಡಿ ವರದಿ ಸಲ್ಲಿಸಿರುತ್ತಾರೆ. ಕಾರಣ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಉಜ್ಜನಿ ಗ್ರಾಮದ ಸನಂ 295ಡಿ. 296ಬಿ. ವಿಸ್ತೀರ್ಣ 4-13. 1-36. ಎಕ್ರೆ ಜಮೀನುಗಳು ಪಾಲು ವಿಭಾಗದ ಒಪ್ಪಿಗೆ ಪತ್ರ ಪ್ರಕಾರ ಅರ್ಜಿದಾರರಾದ ಸೊಕ್ಕೆ ಭರಮಪ್ಪ ತಂದೆ ಸೊಕ್ಕೇರ ಮಲ್ಲಪ್ಪ ನಡುಮಾವಿನಹಳ್ಳಿ ಗ್ರಾಮ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ. ಹಾಗೂ ಮುದ್ರಾಂಕ ಶುಲ್ಕ ಪಾವತಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ: 12-04-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಚೇರಿ ಕೊಟ್ಟೂರು
ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ಸೊಕ್ಕೆ ಭರಮಪ್ಪ ತಂದೆ ಸೊಕ್ಕೇರ ಮಲ್ಲಪ್ಪ ನಡುಮಾವಿನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಕೊಟ್ಟೂರು ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕೆ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.